# ಬದುಕಿನ ದಾರಿಯಲ್ಲಿ ಸೈಕಲ್ ಸವಾರಿ



ಶೀರ್ಷಿಕೆಯಿಂದ ಕುತೂಹಲ ಮೂಡಿಸುವ ಸಿನಿಮಾಗಳ ಪಟ್ಟಿಗೆ ಹೊಸ ಸೇರ್ಪಡೆ ‘ಲೈಫ್ 360’. ಕಳೆದ ವಾರವಷ್ಟೇ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಯಾಗಿದ್ದು, ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಉತ್ಸುಕವಾಗಿದೆ.

‘ಲೈಫ್ 360’ ಅರ್ಜುನ್ ನಿರ್ದೇಶನದ ಸಿನಿಮಾ. ರಂಗಭೂಮಿ ಹಿನ್ನೆಲೆ ಹೊಂದಿರುವ ಅವರು, ಕಿರುಚಿತ್ರಗಳನ್ನು ರೂಪಿಸುವ ಮೂಲಕ ದೃಶ್ಯಮಾಧ್ಯಮದ ಒಲವು ಬೆಳೆಸಿಕೊಂಡಿದ್ದಾರೆ. ‘ಲೈಫ್ 360’ ಚಿತ್ರದ ನಿರ್ಮಾಣದ ಹಿಂದೆಯೂ ಒಂದು ಸ್ವಾರಸ್ಯಕರ ಕಥೆಯಿದೆ. ಕ್ರೌಡ್ ಫಂಡಿಂಗ್ ಮೂಲಕ ಅರ್ಜುನ್ ಚಿತ್ರದ ನಿರ್ಮಾಣವನ್ನು ಆರಂಭಿಸಿದ್ದರು. ಸಿನಿಮಾದ ಕಥೆ ಹಾಗೂ ಅರ್ಜುನ್‌ರ ಬದ್ಧತೆ ಎಸ್. ರಾಜಶೇಖರ್ ಎನ್ನುವ ಉದ್ಯಮಿಗೆ ಮೆಚ್ಚುಗೆಯಾಯಿತು. ಅವರು ಕ್ರೌಡ್‌ಫಂಡಿಂಗ್ ಮೂಲಕ ಹೂಡಿದ್ದ ಹಣವನ್ನು ತಾವೇ ಭರಿಸುವ ಮೂಲಕ ಪೂರ್ಣ ಪ್ರಮಾಣದ ನಿರ್ಮಾಪಕರಾದರು.

ಬದುಕಿನ ಒಂದು ವಿಶಾಲನೋಟವನ್ನು ನೀಡುವ ಪ್ರಯತ್ನ ‘ಲೈಫ್ 360’ ಚಿತ್ರದಲ್ಲಿದೆಯಂತೆ. ಬಾದಾಮಿ, ನಂದಿಬೆಟ್ಟ, ಚಿಕ್ಕಮಗಳೂರು, ಮಡಿಕೆರೆ, ಚಿತ್ರದುರ್ಗ, ಕೊಡಗು, ಮಡಿಕೇರಿ – ಹೀಗೆ ನಾಡಿನ ಹಲವು ಭಾಗಗಳಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ಚಿತ್ರದಲ್ಲಿ (ಛಾಯಾಗ್ರಹಣ: ಅನಿಲ್‌ಕುಮಾರ್) ಸೆರೆಹಿಡಿಯಲಾಗಿದೆ. ಪಯಣದ ಕಥೆಯ ಮೂಲಕ ಬದುಕಿನ ಸೌಂದರ್ಯ ಹಾಗೂ ಚಲನಶೀಲತೆಯನ್ನು ಅನಾವರಣಗೊಳಿಸುವ ಪ್ರಯತ್ನ ಸಿನಿಮಾದಲ್ಲಿ ಇದೆಯಂತೆ. ಶ್ರೀಧರ್ ಹಾಗೂ ವೈಜನಾಥ ಬಿರಾದಾರ್ ತಾರಾಗಣದಲ್ಲಿರುವ ಪ್ರಮುಖರು. ಶ್ರೀಧರ್ ‘ಸಿದ್ಲಿಂಗು’ ಚಿತ್ರದ ಖ್ಯಾತಿಯ ನಟ. ಉಳಿದಂತೆ ಅನುಷಾ ರಂಗನಾಥ್, ಸರ್ದಾರ್ ಸತ್ಯ, ಪಾಯಲ್ ರಾಧಾಕೃಷ್ಣನ್ ತಾರಾಗಣದಲ್ಲಿರುವ ಪ್ರಮುಖ ಕಲಾವಿದರು. ಸೈಕಲ್ಲೊಂದನ್ನು ನಿರ್ದೇಶಕರು ಪ್ರಮುಖ ಪಾತ್ರವೆಂಬಂತೆ ಚಿತ್ರದಲ್ಲಿ ಬಿಂಬಿಸಿದ್ದಾರಂತೆ.



# ಶ್ರಾವ್ಯಾ ಈಸ್ ಬ್ಯಾಕ್!

ಮಾತಿಗಿಂತ ಮೌನವನ್ನೇ ಹೆಚ್ಚು ಇಷ್ಟಪಡುವ ನಟಿ ಶ್ರಾವ್ಯ. ‘ಲೂಸುಗಳು’, ‘ರೋಸ್’, ‘ಕಟ್ಟೆ’, ‘ಪಾಸಿಬಲ್’ ಸಿನಿಮಾಗಳಲ್ಲಿ ನಟಿಸಿದ್ದ ಶ್ರಾವ್ಯ, ಇದೀಗ ‘ದಾದಾ ಈಸ್ ಬ್ಯಾಕ್’ ಚಿತ್ರದ ಮೂಲಕ ಮತ್ತೆ ಸುದ್ದಿಯಲ್ಲಿದ್ದಾರೆ.

‘ದಾದಾ ಈಸ್ ಬ್ಯಾಕ್’ ಸಂತೋಷ್ ನಿರ್ದೇಶನದ ಸಿನಿಮಾ. ‘ಗೊಂಬೆಗಳ ಲವ್’ ಚಿತ್ರದ ಮೂಲಕ ಚಿತ್ರರಸಿಕರ ಗಮನಸೆಳೆದಿದ್ದ ಸಂತೋಷ್ ನಿರ್ದೇಶನದ ಎರಡನೇ ಸಿನಿಮಾ ಇದು. ಈ ಸಿನಿಮಾದಲ್ಲಿ ಶ್ರಾವ್ಯಾ ಚಂದದ ಪಾತ್ರ ನಿರ್ವಹಿಸಿದ್ದಾರಂತೆ. ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ತರುಣಿಯ ಪಾತ್ರದ ನಿರ್ವಹಣೆ ಅವರಿಗೆ ಖುಷಿಕೊಟ್ಟಿದೆ. ಸಂತೋಷ್‌ರ ಹಿಂದಿನ ಸಿನಿಮಾ ಒಂದು ವರ್ಗದ ಪ್ರೇಕ್ಷಕರನ್ನಷ್ಟೇ ಸೆಳೆದಿತ್ತು. ‘ದಾದಾ ಈಸ್ ಬ್ಯಾಕ್’ ಎಲ್ಲ ವರ್ಗದ ಪ್ರೇಕ್ಷಕರಿಗೂ ಇಷ್ಟವಾಗಲಿದೆ ಎನ್ನುವ ವಿಶ್ವಾಸ ಶ್ರಾವ್ಯಾ ಅವರದು.

ಶ್ರಾವ್ಯಾಳಿಗೆ ಮಾತ್ರವಲ್ಲ, ಸಂತೋಷ್ ಅವರ ಪಾಲಿಗೂ ‘ದಾದಾ ಈಸ್ ಬ್ಯಾಕ್’ ಹೆಚ್ಚು ನಿರೀಕ್ಷೆಯ ಸಿನಿಮಾ. ‘ಗೊಂಬೆಗಳ ಲವ್’ಗೆ ಹೋಲಿಸಿದರೆ ಬಜೆಟ್ ದೃಷ್ಟಿಯಿಂದ ಈ ಸಿನಿಮಾ ದುಬಾರಿಯಾದುದು. ಗ್ಯಾಂಗ್‌ಸ್ಟರ್ ಕಥೆಯನ್ನೊಳಗೊಂಡ ಚಿತ್ರದಲ್ಲಿ ಭಾವತೀವ್ರತೆಯ ದೃಶ್ಯಗಳೂ ಸಾಕಷ್ಟಿವೆಯಂತೆ. ಹಲವು ಪದರಗಳ ಕಥೆ ಪ್ರೇಕ್ಷಕರನ್ನು ಸೆಳೆಯಲಿದೆ ಎನ್ನುವ ವಿಶ್ವಾಸ ಅವರದು. ಸಿನಿಮಾವನ್ನು ಬಿಡುಗಡೆಗೆ ಸಜ್ಜುಗೊಳಿಸುತ್ತಿರುವ ನಿರ್ದೇಶಕರು, ಅದಕ್ಕೆ ಮುನ್ನ ಸಾಕಷ್ಟು ಪ್ರಚಾರ ನಡೆಸುವ ಪ್ರಯತ್ನದಲ್ಲಿದ್ದಾರೆ.

ನಾಗೇಶ್ ಆಚಾರ್ಯ ಛಾಯಾಗ್ರಹಣ ಹಾಗೂ ಅನೂಪ್ ಸೀಳಿನ್ ಸಂಗೀತ ಚಿತ್ರಕ್ಕಿದೆ. ಶ್ರಾವ್ಯಾ ಜೊತೆಗೆ – ತಮಿಳು ನಟ ಪಾರ್ಥಿಬನ್, ಸುಧಾರಾಣಿ, ಶರತ್ ಲೋಹಿತಾಶ್ವ, ಅರುಣ್ ಹಾಗೂ ಅಜೇಯ್ ತಾರಾಗಣದಲ್ಲಿರುವ ಪ್ರಮುಖರು.

■ ರಘು